ತಾರೀಖು 19ನೇ ಸೆಪ್ಟಂಬರ್ 1889.

ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನು ಕ್ರಯವಾದ ವಾರಸುದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ವಾಪಸು ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ. ನಂಬರ್ 3.

ಆಫೀಸ್ ಹೆಸರು.	ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ಅಡಿಸ್.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡಿಸ್.	ರಿಜಿಸ್ಟರಿಗೆ ಹಾಜರಾದ ದಿನಾಂಕ	ರಿಜಿಸ್ಟರಾದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
ಮೈಸೂರು ಸಬ್ ರಿಜಿಸ್ಟ್ರಾರ್ ಆಫೀಸ್.	ತಿರಸ್ಕರಿಸಿದ್ದು..	ಮೈಸೂರು ಲಷ್ಕರ್ ಮಹಲೆದಲ್ಲಿರುವ ಪಾವುಬಾನ್ನ ಮಕ್ಕಳು ಆನಂತರಾಮು ಈತನ ತಮ್ಮ ನೀಲಕಂಠರಾವ್ ಈತನ ತಮ್ಮ ರಾಮಚಂದ್ರರಾವ್ ಈತನ ತಮ್ಮ ಮಲ್ಲಾರಿರಾವ್.	ಅಷ್ಟಗ್ರಾಮ ತಾ॥ ಗಂಜಾಂ ದಲ್ಲಿರುವ ಸುಬ್ಬಣ್ಣನವರ ಮಗ ಯಲ್ಲಣ್ಣ.	24 4 80	30 10 84	100 ರೂಪಾಯಿನ ಮನೇ ಕ್ರಯಪತ್ರ.
	ಡಿಟೋ	ಮೈಸೂರು ದೇವರಾಜ ಮೊಹಲ್ಲೆಯಲ್ಲಿರುವ ರಂಗಯ್ಯನವರ ಮಗ ನರಸುಂಡಯ್ಯ.	ಮೈಸೂರು ದೇವರಾಜ ಮೊಹಲ್ಲೆಯಲ್ಲಿರುವ ಲಕ್ಕಯ್ಯನ ಮಗ ಹನುಮಂತಯ್ಯ	17 8 82	3 2 83	50 ರೂಪಾಯಿನ ಮನೇ ಕ್ರಯಪತ್ರ.
	ಡಿಟೋ	ಮೈಸೂರು ಲಷ್ಕರ್ ಮಹಲೆದಲ್ಲಿ ಇರುವ ಲಕ್ಷ್ಮಣರಾವ್ ಮಗ ವೆಂಕಟರಾವ್.	ಅಷ್ಟಗ್ರಾಮ ಡಿವಿಜ್ ಆ ಬ್ಯಾರೀ ಇಜಾರೆದಾರ್ ಮೆ॥ ಕೆ. ವಿ. ಮುದ್ದಪ್ಪ ಅಂಡ್‌ಕೋ ಯವರಿಗೆ.	3 4 83	18 9 83	561-14-3 ಪೈಗೆ ಮನೇ ಆಧಾರ ಪತ್ರ ಮೂರು ತಿಂಗಳಲ್ಲಿ ಮೊಬಲಗು ಕೊಡುವದಾಗಿ—ವಾಯಿದೆ ಒಳಗೆ ಮೊಬಲಗು ಪಾವತಿ ಮಾಡಲು ತಪ್ಪಿದಲ್ಲಿ ಮುಹೆ 1ಕ್ಕೆ ಕೀಕಡಾ 1ಕ್ಕೆ 2 ರೂಪಾಯಿನ ಬಡ್ಡಿ ಕೀರಿಸಿ ಕೊಡುವದಾಗಿ.
	ಡಿಟೋ	ಮೈಸೂರು ಮಂಡೀ ಮಹಲೆಯಲ್ಲಿರುವ ಸದ್ದಿವಾಲ್ ನಂಜುಂಡಯ್ಯನ ಮಗ ಲಿಂಗಣ್ಣ.	ಮೈಸೂರು ಬಸವನ ಮಹಲೆಯಲ್ಲಿರುವ ಮಹದ್ಮದ್ ಜವಾಲ್‌ಸಾಬರ ಮಗ ಟಾಬೂಮಿಯ್ಯಾ ಸಾಬರು.	3 11 83	31 3 84	ಮೈಸೂರು ಮಂಡಿ ಮಹಲೆಯಲ್ಲಿರುವ ಮನೆ ಮತ್ತು ಮೈಸೂರು ನವಾಷಹರ್ ಹೋಬಳಿ ಕೆಸರೆಗ್ರಾಮದಲ್ಲಿರುವ ಪಟ್ಟಿ ಕೊಳಗ ಬೀಜವರಿ ಪೈಳ್ಳ ಗದ್ದೆ ೨½ ಅರ್ಧ ಭಾಗವನ್ನು ಸಪ 500 ರೂಪಾಯಿಗೆ ಆಧಾರ ಮಾಡಿರುವದಾಗಿ ಅಸಲ್ ಮೊಬಲಗನ್ನು ನೆಡದ ಮೃತ್ಯು ದಿವಸ ಅಥವಾ ಅಪೇಕ್ಷೆ ಮಾಡಿದಾಗ ಸಾವತಿ ಮಾಡುವದಾಗಿ.
	ಡಿಟೋ	ಮೈಸೂರು ದೊಡ್ಡಪ್ಯಾಟೆಯಲ್ಲಿರುವ ಅಮೃತಸಾಗರದ ವೆಂಕಟಪ್ಪನ ಮಗ ವೆಂಕಟಪ್ಪ.	ಮೈಸೂರು ಹೊಸ ಅಗ್ರಹಾರದಲ್ಲಿರುವ ನರಸಿಂಹಯ್ಯನವರ ಮಗ ರಾಮಾನುಜಯ್ಯನವರು.	8 8 84	27 2 85	ಮೈಸೂರು ತಾ॥ ಕಸಬಾಕ್ಕೆ ಕೀರಿದ ದ್ಯಾವನೂರು ಗ್ರಾಮದಲ್ಲಿರುವ ತೆಂಗು ಅಡಿಕೆ ತೋಟವನ್ನು ಗುತ್ತಿಗ್ಯೆ ತೆಗದುಕ್ಕೊಂಡಿರುವದಾಗಿ ಫಸಲನ್ನು ತಾನೇ ಅನುಭವಿಸಿಕೊಂಡು ವರ್ಷ 1ಕ್ಕೆ ಗವರ್ನ್‌ಮೆಂಟ್ 75 ರೂಪಾಯಿಗಳನ್ನು ಎರಡು ಕಂತಾಗಿ ಕೊಡುವದಾಗಿ.
	ಡಿಟೋ	ಮೈಸೂರು ತಾ॥ ನವಾಷಹರ್ ಹೋಬಳಿ ಕಳಸ್ತವಾಡಿ ಗ್ರಾಮದಲ್ಲಿರುವ ಬಸವಯ್ಯನವರ ಮಗ ನರಸೇಗವ್ಡ.	ಮೈಸೂರು ಬಸವನ ಮಹಲೆಯಲ್ಲಿರುವ ಚನ್ನಬ್ರಿಲಾಲಾಮಿಯ್ಯಾಸಾಬರವರಕ್ಕಳು ನಾಲಾರ್‌ಮನೂದ ಸಾಬರು.	10 3 85	26 3 85	ಮೈಸೂರು ತಾ॥ ನವಾಷಹರ್ ಹೋಬಳಿಯಲ್ಲಿ ತನ್ನ ಹೆಸರಿನ ಪಟ್ಟೇ ಬಾಬತು 40-41-42ನೇ ನಂ. ಜಮೀನನ್ನು ಆಧಾರ ಮಾಡಿ 500 ರೂಪಾಯಿಗಳು ತೆಗದುಕೊಂಡು ಇರುವದಾಗಿಯೂ ಸಾಲ್ 1ಕ್ಕೆ ಕೀಕಡಾ 1ಕ್ಕೆ ಕೃಷ್ಣರಾಜ ಮೊರು ಖಂಡಗ ಭತ್ತದ ಮೇರೆ ಕೊಟ್ಟು ಯೀಗ್ಗು ವರುಷಕ್ಕೆ ಅಸಲ್ ಮೊಬಲಗು ಕೊಡುವದಾಗಿ—ನಫೆ ಸಾಲಿಸಾಲ್ ಕೊಡದೆ ತಪ್ಪಿದಲ್ಲಿ ದಸ್ತ್ಯೆವಜ್ ತಾರೀಖು ಲಾಗಾಯತು ಸಾಲ್ 1ಕ್ಕೆ ಕೀಕಡಾ 1ಕ್ಕೆ 5 ಖಂಡಗ ಭತ್ತದ ಮೇರೆ ನಫೆ ಕೊಡುವದಾಗಿ.

ಆಫೀಸ್ ಹೆಸರು.	ನಂಬರು.	ದಸ್ತಾವೇಜು ಬರದುಕೊಟ್ಟುವರ ಹೆಸರು ಮತ್ತು ಅಡಿವರ್ಣ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ಅಡಿವರ್ಣ.	ರಿಜಿಸ್ಟ್ರಿಗೆ ಬಂದಾಗಿನ ತಾರೀಖು.	ರಿಜಿಸ್ಟರು ಆದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
ಮೈಸೂರು ಸಬ್ ರಿಜಿಸ್ಟ್ರಿ ಆಫೀಸ್.	ತಿರಸ್ಕರಿಸಿದ್ದು.	ಮೈಸೂರು ಮಂಡಿಮಹಲೇ ದಲ್ಲಿರುವ ಜೋರಯ್ಯನ ಮಗ ಶಿದ್ದಯ್ಯ ಈತನ ಮಗ ಬೋಕ್ಕಳು ಧನಾಭಿವೃದ್ಧಿ ಬ್ಯಾಂಕ್ ರಣ ಸಹ.	ಮೈಸೂರು ಬನವನಮಹಲೆ ಯಲ್ಲಿರುವ ರಾಮರಾಯರ ಮ ಪಿಜಂಟ್ ಕೇವಗಿರಾವ್.	22 1 85	26 5 85	ನಾವುಗಳು ಧನಾಭಿವೃದ್ಧಿ ಬ್ಯಾಂಕಿಗೆ ಕೊಡಬೇಕಾದ ಮೊಬಲಗು ಪೈಕಿ ಕೊಟ್ಟಿರುವದು ಜಾತಾ ಮೊಬಲಗು 282–3–3ನ್ನು ಬಂದು ತಿಂಗಳ ವಳಗೆ ಕೊಡುತ್ತೇವೆಂದು ಮತ್ತು ಮೇಲ್ಕಂಡ ಮೊಬಲಗ್ಕೆ ಮಂಡಿ ಮಹಲೆಯಲ್ಲಿರುವ ಮನೆಯನ್ನು ಆಧಾರಮಾಡಿರುವದಾಗಿ.
	ಡಿಟೋ	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಕಾವೆತಿ ಕಟ್ಟರ ಮಗ ಜರ್ಮಿ ಜೀವನ ಮಾಡುವ ಸುಬ್ಬಾನಾಯಡು.	ಮೈಸೂರು ಲಷ್ಕರ್ ಮಹಲೆಯಲ್ಲಿರುವ ದಾಸಪ್ಪನ ಮಗ ವೆಂಕಟಪ್ಪ.	23 - 4 85	10 10 85	ಮೈಸೂರು ಲಷ್ಕರ್ ಮಹಲೆಯಲ್ಲಿರುವ ಮನೆಯನ್ನು ಆಧಾರ ಮಾಡಿ 60 ರೂಪಾಯಿಗಳು ತೆಗದುಕೊಂಡಿರುವವನ್ನು ಕೇಕಡಾ ಮಾಪ 1ಕ್ಕೆ ಬಂದು ರೂಪಾಯಿ ಮೇರೆ ಅನಲು ಬಡ್ಡಿ ಸಹಯೆರಡು ಖಿಸ್ತಾಗಿ ಪಾವತಿ ಮಾಡುವದಾಗಿ.

ಯಂ. ಅಂನಾಜಿರಾವ್,
ರೆಜಿಸ್ಟ್ರಾರ್.

ತಾರೀಖು 20ನೇ ಸೆಪ್ಟಂಬರ್ 1889.

ಸಕಲನಜಗಳಿಗೂ ಯಿದರಿಂದ ತಿಳಯಪಡಿಸುವದೇನಂದರೆ, ಮೈಸೂರಿನಲ್ಲಿ ಹೊಸದಾಗಿ ತಯಾರಾಗತಕ್ಕ ಶಿಲೇದಾರ್ ಲೈಕ್ ಕಾಮುಗಾರಿ ಕಂಟ್ರಾಕ್ಟಿಗಾಗಿ ಮೊಹರನ್ನಿಟ್ಟು ಬರುವ ದರಖಾಸ್ತುಗಳನ್ನು ಮೈಸೂರು ಡಿವಿಜ್ಞ್ ಯಗ್ಜಿಕ್ಯೂಟಿವ್ ಯಿಂಜನಿಯರವರ ಆಫಿಸಿನಲ್ಲಿ ಬರುವ ಆಕ್ಟೋಬರ್ 9ನೇ ತಾರೀಖು ಪರಿಯಂತರ ಹಿಡಿಯಲ್ಪಡುವದು.

ಸುಮಾರು ಅಂದಾಜಾ ಪರಿಮಾಣವನ್ನು ಈ ಕೆಳಗೆ ವಿವರಿಸಿಯಿದೆ. ಈ ಪರಿಮಾಣವು ಗೊತ್ತಾದ್ದಲ್ಲ ಕಾಮುಗಾರಿಯು 1891ನೇ ಇಸವಿ ಜೂಕ್ ಆಖೈರಿನಲ್ಲಿ ಪೂರೈಸತಕ್ಕದ್ದು.

2. ಪ್ಲಾನ್ ಅಂದಾಜಾ ಯಿತರ ಸಂಗತಿ ಸಹ ದಿವಿ 11 ಘಂಟೆ ಲಾಗಾಯತು ಸಾಯಂಕಾಲ 5 ಘಂಟೆ ವರಿಗೆ ಮೈಸೂರು ಡಿವಿಜ್ಞ್ ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ನೋಡಬಹುದು.

3. ದರಖಾಸ್ತುಗಳು ಅಚ್ಚಿನ ನಮೂನೆಯಲ್ಲಿ ಯಿರಬೇಕು. ಈ ನಮೂನೆಯನ್ನು ಯಗ್ಜಿಕ್ಯೂಟಿವ್ ಇಂಜನಿಯರ್ ಆಫಿಸಿನಲ್ಲಿ ಪಡಿಯ ಬಹುದು. ತರಹೇವಾರಿಕೆಲಸವನ್ನು ಯಾವ ಯಾವ ದರದಲ್ಲಿ ನಡಿಸಲ್ಪಡಬಹುದೋ ಅದನ್ನು ತೋರಿಸುವ ಕೆಳಗೆ ಕೊಟ್ಟುಯಿರುವ ಫಾರಂನಂತೆ ಬಂದು ಪಟ್ಟಿ ತಯಾರಿಯಿಂದ ದರಖಾಸ್ತನೊವನೆ ಕಳುಹಿಸಿಕೊಡಬೇಕು.

4. ಪ್ರತಿ ದರಖಾಸ್ತುಗಳೂ ಗವರ್ಮೆಂಟ್ ಪ್ರೋನೋಟ್ ಮೂಲಕವಾಗಲಿ ನಗದಾಗಲಿ 50 ರೂಪಾಯಿ ಡಿಪಾಜಿಟ್ಟನ್ನೊಡ್ಡಗೂಡಿ ಯಿರಬೇಕು ಮತ್ತು ವೈಸೂರಿನಲ್ಲಿ ಕಟ್ಟಲ್ಪಡುವ ಶಿಲೇದಾರ್ ಲೈಕ್ ಕಾಂಗಾರಿ ಕಂಟ್ರಾಕ್ಟ್ ದರಖಾಸ್ತು ಯಂತ ಲಿಫಾಫೆ ಮೇಲೆ ಬರದು ಯಿರಬೇಕು ಹೀಗೆ ಯಿರದೆ ಬರುವ ದರಖಾಸ್ತುಗಳನ್ನ ತಿರಸ್ಕರಿಸಲ್ಪಡುವದು.

5. ದರಖಾಸ್ತುಗಳನ್ನು ಅಂಗೀಕರಿಸತಕ್ಕದ್ದು ಚೀಫ್ ಯಿಂಜನಿಯರವರದಾಗಿ ಯಿಧೆ ಅವರು ಕಂಟ್ರಾಕ್ಟರ ವ ಇತರ ದರಖಾಸ್ತನ್ನು ಮಂಜೂರ್ಮಾಡುವದಕ್ಕೂ ಅಥವಾ ದರಖಾಸ್ತನ್ನು ತಿರಸ್ಕರಿಸಿದ್ದಕ್ಕೆ ಕಾರಣವನ್ನು ಹೇಳುವದಕ್ಕೂ ಬದ್ಧರಾಗಿಯಿವರಿಲ್ಲವು.

6. ಯಾವ ದರಖಾಸ್ತು ಮಂಜೂರು ಮಾಡಲ್ಪಡುವದೋ ಆಂಥಾ ದರಖಾಸ್ತುದಾರನ ಹೆಸರನ್ನು ಯಗ್ಜಿಕ್ಯೂಟಿವ್ ಯಿಂಜನಿಯರ್ ಆಫಿಸ್ ನೋಟಿಸ್ ಬೋರ್ಡಿನಲ್ಲಿ ಕ್ರಮೇಣ ಚಿಕಟಾಯಿಸಲ್ಪಡುವದು. ದರಖಾಸ್ತು ಮಂಜೂರಾಯಿತೇ ಅಥವಾ ಅನಂಗೀಕಾರವಾಯಿತೇ ಯಂಬು ಬರುವ ಪ್ರಶ್ನೆಗಳಿಗೆ ಜವಾಬು ದೊರಿಯಲಾರದು.

7. ದರಖಾಸ್ತು ಮಂಜೂರು ಮಾಡಿದ 8 ರೋಜುಗಳವಳಗಾಗಿ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಹಾಜರಾಗಿ ಕಂಟ್ರಾಕ್ಟ್ ಬಾಂಡನ್ನು ಬರದು ಕೊಡತಕ್ಕದ್ದು. ಹೀಗೆ ಮಾಡದಿರುವ ಸಂದರ್ಭದಲ್ಲಿ ದರಖಾಸ್ತು ರದ್ದಾದ ಹಾಗೆ ಭಾವಿಸಲ್ಪಡುವದಲ್ಲದೆ ದರಖಾಸ್ತುದಾರನು ತನ್ನ ಡಿಪಾಜಿಟ್ ಮೊಬಲಗನ್ನು ಹೋಗಲಾಡಿಕೊಳ್ಳುವನು.

8. ದರಖಾಸ್ತುಗಳ ಪೈಕಿ ಬಂದು ದರಖಾಸ್ತು ಅಂಗೀಕಾರವಾದ ಕೂಡ್ಲೆ ಅನಂಗೀಕಾರವಾದ ದರಖಾಸ್ತುಗಳ ಡಿಪಾಜಿಟ್ ಹಣವು ವಾಪಸ್ ಮಾಡಲ್ಪಡುವದು.